ಶ್ರೀ ಬಿ.ಎಸ್. ಯಡಿಯೂರಪ್ಪ : ಮಾಡಿಕೊಳ್ಳಿ, ಯಾರು ಬೇಡವೆನ್ನುತ್ತಾರೆ? ಹೆದರಿಸಿದರೆ ನಾವು ಹೆದರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಜೋರಾಗಿ ಮಾತನಾಡಿದರೆ, ನಾನೂ ಜೋರಾಗಿ ಮಾತನಾಡುತ್ತೇನೆ. ನಿಮಗೊಬ್ಬರಿಗೇ ಅಲ್ಲ ಕೋಪ ಬರುವುದು. ನನಗೂ ಕೋಪ ಬರುತ್ತದೆ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾನು ಹೇಳುತ್ತೇನೆ, ಈ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹಾಳು ಮಾಡಿದ್ದೀರಿ. ಸಂಪನ್ಮೂಲ ಕ್ರೂಢೀಕರಣ ಮಾಡುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಅಭಿವೃದ್ಧಿ ಕೆಲಸಗಳಿಗೆ ನಿಮ್ಮ ಹತ್ತಿರ ಹಣವಿಲ್ಲ. ಅಭಿವೃದ್ಧಿ ಕೆಲಸಗಳು ಸಂಪೂರ್ಣವಾಗಿ ಕುಂಠಿತವಾಗಿವೆ. ಪ್ರವಾಹದಿಂದ ಪೀಡಿತರಾದ ಜನರಿಗೆ ನೀವು ಸರಿಯಾಗಿ ಪರಿಹಾರವನ್ನು ಕೊಟ್ಟಿಲ್ಲ. ಕೇಂದ್ರ ಸರ್ಕಾರ ಕೊಟ್ಟಿರುವಂಥ ಹಣವನ್ನೂ ಕೂಡ ಸರಿಯಾಗಿ ಖರ್ಚು ಮಾಡಿಲ್ಲ. ವಿದ್ಯುತ್ ಕ್ಷಾಮವನ್ನು ಬಗೆಹರಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಈ ಸರ್ಕಾರದವರು ತಮ್ಮ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ಮಾಡಬಾರದಂಥ ಕೆಲಸಗಳನ್ನು ಮಾಡಿದ್ದೇವೆ ಎಂದು ನೀವೇ ಹೇಳಿದ್ದೀರಿ. ನಿಮ್ಮ ಉತ್ತರದಿಂದ ನಮಗ್ಯಾರಿಗೂ ಕೂಡ ತೃಪ್ತಿಯಾಗಿಲ್ಲ, ಸಮಾಧಾನವಾಗಿಲ್ಲ, ನಾವು ಇದನ್ನು ವಿರೋಧ ಮಾಡಿ, walk out ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳು ನಾಳೆ ಬಜೆಟ್‌ಅನ್ನು ಮಂಡನೆ ಮಾಡಬೇಕಾಗಿರುವುದರಿಂದ ನಾವು ಅವರಿಗೆ ಯಾವುದೇ tension ಕೊಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅವರು ನಾಳೆ ಈ ರಾಜ್ಯದ ಐದು ಕೋಟಿ ಜನತೆಗೆ ಉತ್ತಮವಾದಂಥ ಒಂದು ಬಜೆಟ್ ಕೊಡಬೇಕು. ನಮಗೇನು ಅವರ ಬಗ್ಗೆ ಯಾವುದೇ ದ್ವೇಷವಾಗಲೀ, ಮತ್ತೊಂದಾಗಲೀ ಇಲ್ಲ. ಅವರಿಗೆ ಒಳ್ಳೆಯದಾಗಲಿ. 18 ತಿಂಗಳಿಂದ ನಾನು